ನಾಟಕದಲ್ಲಿ ಶೇಕ್ಸ್ಪಿಯರ್, ಮರಣದಂಡನೆಗೊಳಗಾದ ಕ್ಲಾಡಿಯೋನ ಬಾಯಲ್ಲಿ ಸಾವನ್ನು ಕುರಿತು – ತಾನೂ ಮತ್ತು ಸ್ವತಃ ಆ ಪಾತ್ರವೂ ಬದುಕಿರುವಾಗಲೇ – ಆಡಿಸಿರುವ ಈ 'ಅನಧಿಕೃತ' ಮಾತುಗಳನ್ನು ನೋಡಿ:

ಹೌದು... ಹಾಗಿದ್ದರೂ ಸಾಯುವುದು ಅಂದರೆ ಅದು –
ಎಲ್ಲಿಗೆಂದು ಗೊತ್ತಿಲ್ಲದೆಯೇ ಹೋಗುವ ಹಾದಿಯ ಹಾಗೆ,
ಕಾರ್ಗತ್ತಲೆಯ ಕೂಪದಲ್ಲಿ ಕೂತು ಕೊಳೆಯುವ ಹಾಗೆ,
ಬಿಸಿಕಳೆದು ಮರಗಟ್ಟಿ ಆಕಾರ ಮುದ್ದೆಯಾಗುವ ಹಾಗೆ,
ರುದ್ರಪ್ರವಾಹದಲ್ಲಿ ಮುಳುಗಿ ತಳಕಾಣದ ಹಾಗೆ,
ಗಾಳಿಯಲ್ಲಿ ಹುಡಿಯಾಗಿ ದಿಕ್ಕಿಲ್ಲದೆ ಬೀಸುವ ಹಾಗೆ,
ಅದು – ತಿಳಿವಿಗೆ ಸಿಕ್ಕಲಾರದ ಅಧಮಾಧಮ ಸ್ಥಿತಿ. (ಅಂಕ 3, ದೃಶ್ಯ 1)

ಗೊತ್ತಿಲ್ಲದೆ ಹೋಗಬೇಕಿರುವ ಹಾದಿಯನ್ನು ಕೂಡ ಗೊತ್ತಿರುವ ಮಾತುಗಳಲ್ಲೇ ಹೇಳಬೇಕಾದ ಮತ್ತು ಸಾವನ್ನೂ ಬದುಕಿನ ಪ್ರತಿಮೆಗಳ ಮೂಲಕವೇ ಕಟ್ಟಬೇಕಿರುವ ಭಾಷೆಯ ಹಣೆಬರಹಕ್ಕೆ ಈ ಮಾತು ಒಳ್ಳೆಯ ದೃಷ್ಟಾಂತ. ಹಾಗೇ, ನಿದ್ದೆಯನ್ನೂ ಕೂಡಾ ಎಚ್ಚರದ ಮಾತುಗಳಲ್ಲಿ ಮಾತ್ರವೇ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ ಎಂದೂ ಹೇಳದೆ ವಿಧಿಯಿಲ್ಲ. ಇನ್ನೂ ಸಾಧಾರಣೀಕರಿಸಿ ಹೇಳುವುದಾದರೆ – ಎಲ್ಲ ಅಭಿವ್ಯಕ್ತಿಯೂ ಅಂತಿಮವಾಗಿ ತಿಳಿವಿಗೆ ಸಿಕ್ಕದ ಸಂಗತಿಗಳನ್ನು ತಿಳಿವಿಗೆ ತಂದುಕೊಳ್ಳುವ ಪ್ರಯತ್ನವಾಗಿರುವುದರಿಂದ, ನಿದ್ದೆ ಬಂದಾಗಲೇ ನಿದ್ದೆಯ ಬಗ್ಗೆ ಬರೆಯುವುದು ಎಷ್ಟು ಅಸಾಧ್ಯವೋ, ಹಾಗೇ, ಸುಲಭಕ್ಕೆ ನಿದ್ದೆ ಬರುವವರು ನಿದ್ದೆ ಬಾರದ ಬಗ್ಗೆ ಬರೆಯುವುದೂ ಕೂಡ ಅನಧಿಕೃತ ಕೆಲಸವೇನೂ ಅಲ್ಲ ಎಂಬುದೂ ಇಂಥ ಉದಾಹರಣೆಗಳಿಂದಲೇ ಸಾಬೀತಾಗುತ್ತದೆ. ಈ ಬಗೆಯಲ್ಲಿ, ನಿದ್ದೆ ಬಾರದ ಆಲೋಚನೆಗಳ ಮುಖಾಂತರ, ಹಲವೊಮ್ಮೆ ಒಂದು ಪ್ರಸ್ತಾಪವೂ ಅದರ ವಿರುದ್ಧವೂ ಒಟ್ಟೊಟ್ಟಿಗೇ ಸತ್ಯವಾಗಿ ಕಾಣಬಲ್ಲ ತಾರ್ಕಿಕ ವಿಪರ್ಯಾಸವನ್ನು ನಾನು ಹಲವೊಮ್ಮೆ ಅನುಭವಿಸಿ ದಂಗಾಗಿದ್ದೇನೆ.

★★★

ಇಷ್ಟರಲ್ಲಾಗಲೇ ಈ ಪ್ರಬಂಧದಲ್ಲಿ ಓದುಗರಿಗೆ ಕಂಡಿರಬಹುದಾದ ವಿಶಿಷ್ಟ–ವಿಕ್ಷಿಪ್ತ ವೈಚಾರಿಕ ಕ್ರಮವು ನನಗೆ ದೊರಕಿದ್ದು ನಿದ್ದೆ ಬಾರದ ವೇಳೆ ಎದ್ದ ಜಿಜ್ಞಾಸೆಗಳ ಮೂಲಕವೇ ಎಂಬುದನ್ನೂ ನಾನಿಲ್ಲಿ ನಿವೇದಿಸಿಕೊಳ್ಳಬೇಕು. ನನ್ನ ಬದುಕಿನಲ್ಲಿ ಅಂಥ ನಿದ್ರಾಭಂಗದ ಪ್ರಸಂಗವು ಸಂಭವಿಸತೊಡಗಿದ್ದು ನನಗೂ ಗೊತ್ತಾಗದಿದ್ದಷ್ಟು ನಿಧಾನವಾಗಿ. ಒಂದಾನೊಂದು ಕಾಲದಲ್ಲಿ ನನಗೂ ಮಲಗಿದ ಕೂಡಲೇ ನಿದ್ದೆ ಹತ್ತುತ್ತಿತ್ತು; ಎದ್ದ ಬಳಿಕ ಮಾತ್ರವೇ ನಿದ್ದೆಯ ಬಗ್ಗೆ ಚಿಂತಿಸಲು ಸಾಧ್ಯವಾಗುತ್ತಿತ್ತು. ಈ ಸ್ಥಿತಿ ಬದಲಾಗಿ ಹೊಸ ನಿದ್ರಾಭಂಗದ ನಿದ್ರಾಚಿಂತನೆಯು ಉದ್ಭವಿಸಲಿಕ್ಕೆ ಮೂಲಕಾರಣವು ನನ್ನ ಹೊಟ್ಟೆ– ಎಂಬುದು ವಿಚಿತ್ರವಾದರೂ ನಿಜ. ಮೊದಮೊದಲು ಹೊಟ್ಟೆಯೊಳಗಿನಿಂದ ಹುಟ್ಟುವ ಸಹಜವಾದ ಗುಡುಗುಡು ಸದ್ದಿನಿಂದ ಆರಂಭವಾದ ಈ ವಿದ್ಯಮಾನವು ಕ್ರಮೇಣ, ನಾನಾ ಬಗೆಯ ಅಜೀರ್ಣಸಂಬಂಧಿ ಸಮಸ್ಯೆಗಳಿಗೆ ಕಾರಣವಾಗಿ ನಾನು ವೈದ್ಯರ ಸಹಾಯ ಪಡೆಯಬೇಕಾದ ಪರಿಸ್ಥಿತಿ ಒದಗಿತು. ವೈದ್ಯರೇನೋ ಇದನ್ನು ತುಂಬ ಸಹಜವಾದ ಕಾಯಿಲೆಯೆಂದೇ ಪರಿಗಣಿಸಿ ಮದ್ದು ಕೊಟ್ಟರಾದರೂ, ಆ ಮದ್ದು ಬಿಟ್ಟೊಡನೆ ಮತ್ತೆ ಸಮಸ್ಯೆ ಮರುಕೊಳಿಸುತ್ತ ಇದು ವರ್ಷಾಂತರದಾಚೆಗೂ ವ್ಯಾಪಿಸಿಕೊಂಡು, ರಾತ್ರಿ ನನಗೆ ಸುಲಭವಾಗಿ ನಿದ್ದೆ ಬಾರದ ಸನ್ನಿವೇಶಕ್ಕೆ ತಂದು ನಿಲ್ಲಿಸಿತು. ಅಂಥ ಸಂದರ್ಭದ ಒಂದು ಆಸ್ಪತ್ರೆ